ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

...ನೇ ವರ್ಷ 38ನೇ ಸಂಚಿಕೆ ಕೊಪ್ಪ 23-6-1985 ಭಾನುವಾರ ಬೆಲೆ 40 ಪೈಸೆ

ಕೊಪ್ಪ ಬಸ್ ಸ್ಟ್ಯಾಂಡಿನಲ್ಲಿ ಪುರಸಭೆಯ ವಿವಾದಗ್ರಸ್ತ

10 ಮಳಿಗೆಗಳ ತೆರವು

ಕೊಪ್ಪ: ಇಲ್ಲಿನ ಬಸ್ ಸ್ಟ್ಯಾಂಡಿನಲ್ಲಿರುವ ಪುರಸಭೆಯ 10 ಮಳಿಗೆಗಳ ಬಾಡಿಗೆದಾರರು ಪುರಸಭೆಯ ಮೇಲೆ 1981 ರಿಂದ ನಡೆಸಿದ ಕೋರ್ಟ್ ಸಮರ ಬಾಡಿಗೆದಾರರ ತೀವ್ರ ಸೋಲಿನೊಂದಿಗೆ ಕೊನೆಗೊಂಡಿದೆ.

ಈ ಹಿಂದೆಯೇ ಅಂದರೆ 1983ರಲ್ಲಿಯೇ ಹೈಕೋರ್ಟಿನಲ್ಲೂ ಅವರ ಪ್ರಕರಣ ವಜಾ ಮಾಡಲ್ಪಟ್ಟಿದ್ದು, ತಮ್ಮನ್ನು ಖಾಲಿ ಮಾಡಿಸುವುದರ ವಿರುದ್ಧ ಅವರು ಮತ್ತೆ ಚಿಕ್ಕಮಗಳೂರು ಕೋರ್ಟಿನಲ್ಲಿ ಹೂಡಿದ್ದ ವ್ಯಾಜ್ಯವೂ ಈಗ ವಜಾ ಆಗಿದೆ.

17-6-85 ರಂದು ಚಿಕ್ಕಮಗಳೂರು ಕೋರ್ಟು ನೀಡಿರುವ ತೀರ್ಪಿನ ಜೊತೆಗೆ ರಿಸರ್ವ್ ಪೋಲೀಸ್ ಬೆಂಬಲವೂ ಪುರಸಭೆಗಿದ್ದ... 19-6-85 ರಂದು ಎಲ್ಲ ಬಾಡಿಗೆದಾರರೂ ... ಪುರಸಭೆಯ ಸೌಜನ್ಯದಿಂದಾಗಿ ತಮ್ಮ ತಮ್ಮ ಮಾಲುಗಳ ಸಮೇತ ಮಳಿಗೆಗಳನ್ನು ಖಾಲಿ ಮಾಡಿದರು. ಸದ್ಯದಲ್ಲೇ ಈ ಮಳಿಗೆಗಳ ಹರಾಜು ನಡೆಯುವ ನಿರೀಕ್ಷೆ ಇದೆ.

ಕೋರ್ಟಿನ ಆದೇಶಗಳನ್ನೂ ಮೀರಿ ಅವರೆಲ್ಲ ಬಾಡಿಗೆಯನ್ನೇ ಕಟ್ಟದೆ ಬಾಕಿ ಉಳಿಸಿಕೊಂಡಿರುವ ತಲಾ 14-15 ಸಾವಿರ ರೂ.ಗಳ (ಒಟ್ಟು ಸುಮಾರು ಒಂದೂವರೆ ಲಕ್ಷ ರೂ.) ವಸೂಲಿಗಾಗಿ ಈಗ ಪುರಸಭೆ ಕ್ರಮ ಕೈಗೊಳ್ಳಲಿದೆ. ಯಥಾ ಪ್ರಕಾರ ಇದೂ ಇನ್ನೊಂದು ದೀರ್ಘ 'ಕಾನೂನಿನ ಸಮರ'ವಾಗಬಹುದು.

ಈ ಪ್ರಕರಣದ ಜೊತೆಗೇ, ಪುರಸಭೆಯ ಕ್ವಾರ್ಟರ್ಸಿನಲ್ಲಿ ಉಳಿದಿದ್ದ (ಅಮಾನತಿನಲ್ಲಿರುವ) ಮಾಜಿ ಬಿಲ್ ಕಲೆಕ್ಟರ್ ಲಕ್ಷ್ಮೀನಾರಾಯಣನ ಪ್ರಕರಣವೂ ಬಿದ್ದುಹೋಗಿ ಆತನನ್ನೂ ಮನೆಯಿಂದ ಖಾಲಿ ಮಾಡಿಸಲಾಗಿದೆ. (3 ನೇ ಪುಟ ನೋಡಿ)

ಅಂತರರಾಷ್ಟ್ರೀಯ ಯುವ ವರ್ಷದ ಕಥಾ ಸ್ಪರ್ಧೆ

ಗುಡ್ಡೇತೋಟ: ಇಲ್ಲಿನ ಶ್ರೀ ವಿನಾಯಕ ಪ್ರಕಾಶನವು ಅಂತರ ರಾಷ್ಟ್ರೀಯ ಯುವ ವರ್ಷದ ಅಂಗವಾಗಿ ಕಥಾ ಸ್ಪರ್ಧೆಯೊಂದನ್ನು ಏರ್ಪಡಿಸಿದ್ದು ಕಥೆಗಳು ಸ್ವತಂತ್ರವಾಗಿರಬೇಕು; ಸಾಮಾಜಿಕ, ನೈತಿಕ ಮೌಲ್ಯಗಳನ್ನೊಳಗೊಂಡಿರಬೇಕು. ಕಥೆಗಳನ್ನು ಕಳಿಸುವವರು ಎರಡು ರೂ. ಪ್ರವೇಶ ಶುಲ್ಕದೊಂದಿಗೆ ಕಳಿಸುವುದು.

ಜುಲೈ 5 ನೇ ತಾರೀಖಿನೊಳಗಾಗಿ ಸ್ಪರ್ಧೆಗೆ ಕತೆಗಳನ್ನು ಕಳಿಸುವ ವಿಳಾಸ: ಎಂ. ಬಿ. ಗಂಗಾಧರ್, ಪ್ರಕಾಶಕ, ಶ್ರೀ ವಿನಾಯಕ ಪ್ರಕಾಶನ, ಗುಡ್ಡೇತೋಟ ಅಂಚೆ, ಕೊಪ್ಪ ತಾಲ್ಲೂಕ್. ಈ ಸ್ಪರ್ಧೆಯಲ್ಲಿ ಆಯ್ಕೆಯಾದ ಕತೆಗಳನ್ನು ಶ್ರೀ ವಿನಾಯಕ ಪ್ರಕಾಶನವು ಹೊರತರಲಿರುವ ಕಥಾ ಸಂಕಲನದಲ್ಲಿ ಪ್ರಕಟಿಸಲಾಗುವುದು.

ಮಾಜಿ ತಾ. ಅ. ಮಂಡಳಿ ಸದಸ್ಯನಿಂದ

ಹರಿಜನರ ಎತ್ತಂಗಡಿ ಹವಣಿಕೆ: ದಲಿತ ಸಂಘರ್ಷ ಸಮಿತಿ ಚಳುವಳಿ ಎಚ್ಚರಿಕೆ

ಜಯಪುರ: ಕೊಪ್ಪ ತಾ.ಅ. ಮಂಡಳಿಯ ಮಾಜಿ ಸದಸ್ಯರೊಬ್ಬರು ಇಲ್ಲಿಗೆ ಸಮೀಪದ ಸಣ್ಣ ಕೌಳಿ ಎಂಬಲ್ಲಿ ಮೂರು ತಲೆಮಾರುಗಳಿಂದ ವಾಸವಾಗಿರುವ ಹರಿಜನರ 20 ಕ್ಕೂ ಹೆಚ್ಚು ಕುಟುಂಬಗಳನ್ನು ಸ್ಥಳಾಂತರಿಸಿ ಆ ಪ್ರದೇಶ ವಶಪಡಿಸಿಕೊಳ್ಳಲು ಯತ್ನಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ಚಿಕ್ಕಮಗಳೂರು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಪ್ರಯತ್ನದಿಂದಾಗಿ ಈ ಪ್ರಕರಣ ಈಗ ಬಗೆಹರಿಯುವ ಒಂದು ಹಂತಕ್ಕೆ ಬಂದಿರುವುದಾಗಿ ಗೊತ್ತಾಗಿದೆ.

ವಾಸದ ನೆಲವೂ ದರ್ಖಾಸ್ತು

ಕೂಳೂರು ಗ್ರಾಮದ ಸ. ನಂ. 71ರಲ್ಲಿ ಈ ಹರಿಜನ ಕುಟುಂಬಗಳು ವಾಸಿಸುತ್ತಿರುವ ಭೂಮಿಯೂ ಸೇರಿದಂತೆ 20 ಎಕರೆಗೆ ತಾ.ಅ. ಮಂಡಳಿ ಮಾಜಿ ಸದಸ್ಯ ಕೆ. ಸುಬ್ಬಣ್ಣ ದರ್ಖಾಸ್ತು ಕೊಟ್ಟಿದ್ದು, ಆಗ ಉಪ ವಿಭಾಗಾಧಿಕಾರಿಗಳಾಗಿದ್ದ ಕೆ. ನರಸಿಂಹಯ್ಯ ಏಪ್ರಿಲ್ 84 ರಲ್ಲಿ ಅದನ್ನು ರದ್ದು ಮಾಡಿ, 21 ಕುಟುಂಬಗಳಿಗೆ 30'x 40' ಅಳತೆಯ ಮನೆದಳದ ಹಕ್ಕು ಪತ್ರವನ್ನು 14.5.84 ರಲ್ಲಿ ಕೊಪ್ಪ ತಹಸೀಲ್ದಾರರಿಂದ ಕೊಡಿಸಿದ್ದರು. ಹಾಗೂ ಹರಿಜನರ ಬಗರ್ ಹುಕುಂ ಸಾಗುವಳಿ ಭೂಮಿಯಿದ್ದರೆ ಅದನ್ನು ಸಕ್ರಮ ಗೊಳಿಸುವಂತೆ ಆದೇಶಿಸಿದ್ದರು. ಇದರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ.

ಆದರೂ ಈಗಲೂ ಸುಬ್ಬಣ್ಣ ಮತ್ತು ಅವರ ತಮ್ಮಂದಿರು ಈ ಜಾಗ ನಮಗೆ ಮಂಜೂರಾಗಿದೆಯೆಂದು ಹೇಳುತ್ತ ಈ ಹರಿಜನರಿಗೆ ಕಿರುಕುಳ ಕೊಡುವುದು, ಅವರು ಸೊಪ್ಪು-ಸೌದೆ ಕಡಿದರೆ ಸೀದಾ ಬಾಳೆಹೊನ್ನೂರು ಪೋಲೀಸ್ ಸ್ಟೇಷನ್ನಿನಲ್ಲಿ 'ಕಂಪ್ಲೇಂಟ್' ಕೊಟ್ಟು ಹೊಡೆಯಿಸುವುದು ಇತ್ಯಾದಿ ಮಾಡುತ್ತಿದ್ದಾರೆನ್ನಲಾಗಿದೆ. ಈಚೆಗೆ ಶೆಟ್ಟಿ ಎಂಬವರು ಮನೆಯ ಮಾಡಿಗೆಂದು ಒಂದೆರಡು ಗಳ ಕಡಿದಿದ್ದಕ್ಕೆ ಮೇ 21 ರ ರಾತ್ರಿ ಅವರನ್ನು ಬಾಳೆಹೊನ್ನೂರು ಠಾಣೆಗೆ ಕರೆಸಿ ಚೆನ್ನಾಗಿ ಥಳಿಸಿ ಹೊರಗೆ ಬಿಡಲಾಗಿದ್ದಿತ್ತು. (ಇದರ ವಿರುದ್ಧ ನೀಡಲಾದ ದೂರುಗಳು ಇತ್ಯಾದಿ ಅವಿಯಾಗಿ ಹೋಗಿವೆ.) ...

ಜನತಾ ಮನೆ?

ಈ ಕುಟುಂಬಗಳವರನ್ನೆಲ್ಲ ಇಲ್ಲಿಂದ ಎತ್ತಂಗಡಿ ಮಾಡಿ ತಮ್ಮ ಕೆಲಸ ಸಾಧಿಸಿಕೊಳ್ಳುವ ಹಂಚಿಕೆಯಲ್ಲಿ ಸುಬ್ಬಣ್ಣ 8 ಜನರಿಗೆ ಮುಕ್ಕೆ ಕೊಪ್ಪದಲ್ಲಿ ಜನತಾ ಮನೆ ಮಂಜೂರು ಮಾಡಿಸಿದರೆನ್ನಲಾಗಿದೆ. ಆದರೆ ಇದ್ದ ಸೌಕರ್ಯ ಬಿಟ್ಟು ಸೌಕರ್ಯವಿಲ್ಲದ ಕಡೆ ಹೋಗಲು ಇವರ್ಯಾರೂ ಒಪ್ಪಲಿಲ್ಲ. ಆದರೂ ಅವರೇ ನಾಲ್ಕು ಕಲ್ಲುಕಂಬ ಮತ್ತು ಮಾಡು ಉಳ್ಳ 4 ಕೊಟ್ಟಿಗೆಗಳನ್ನು ಕಟ್ಟಿಸಿದ್ದು, ಕಾಲಕ್ರಮೇಣ ಅವೆಲ್ಲ ನಾಪತ್ತೆಯಾಗಿವೆ. ಕಲ್ಲು ಕಂಬಗಳನ್ನು ಮಾತ್ರ ಕಳೆದ ವರ್ಷ ಸುಬ್ಬಣ್ಣ ಅವರ ಮನೆಗೇ ಸಾಗಿಸಿದ್ದಾಗಿ ಹೇಳಲಾಗಿದೆ. (ನಾಲ್ಕನೇ ಪುಟಕ್ಕೆ)

ಕೋವಿಲೈಸೆನ್ಸ್ ನವೀಕರಣಕ್ಕೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಯಾರ ಕೈವಾಡ?

ಕೊಪ್ಪ: ಕೋವಿ ಲೈಸೆನ್ಸ್ ನವೀಕರಣ ತಮ್ಮ ಕಚೇರಿಯಲ್ಲಿ ಒಂದೇ ದಿನದಲ್ಲಿ ಆಗುವಂತೆ ವ್ಯವಸ್ಥೆ ಮಾಡಿದ್ದು, ಬೇಗ್ಗೆ ನವೀಕರಣಕ್ಕೆ ಅರ್ಜಿ ಸಲ್ಲಿಸಿ, ಟೋಕನ್ ಪಡೆದುಕೊಂಡು ಹೋಗಿ ಸಂಜೆಯೊಳಗೆ ಬಂದು ನವೀಕೃತ ಲೈಸೆನ್ಸ್ ಪಡೆಯಬಹುದೆಂದು ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ಕಳೆದ ವರ್ಷ ಪತ್ರಕರ್ತರಿಗೆ ತಮ್ಮ ಕಚೇರಿಯ ಪುನರ್ ಘಟನೆಯನ್ನು ತೋರಿಸುತ್ತ ಹೇಳಿದ್ದರು.

ಆದರೆ ಈಗ ಅಲ್ಲಿ ನವೀಕರಣಕ್ಕೆ ನಾಲ್ಕೈದು ದಿನ ಮಾಡುತ್ತಿದ್ದಾರಲ್ಲದೆ 50 ರೂ. ಗೆ ಕಮ್ಮಿಯಿಲ್ಲದಂತೆ ಲಂಚ ವಸೂಲು ಮಾಡುತ್ತಿದ್ದಾರೆಂದು ಈ ಭಾಗದ ಹಲವು ಹಳ್ಳಿಗರು ನಮ್ಮ ಪತ್ರಿಕೆಗೆ ದೂರಿದ್ದಾರೆ.

ಈ ವಿಷಯ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿದೆಯೆ? ಇದರಲ್ಲಿ ಯಾರ ಕೈವಾಡವಿದೆ ಎಂದು ಅವರು ಪರಿಶೀಲಿಸುವರೆ? ಎಂದು ಕಾದು ನೋಡಬೇಕು.

ಜೊತೆಗೆ ಹಳ್ಳಿಗರು ಇಷ್ಟು ದೂರದಿಂದ ತಮ್ಮ ಕೋವಿಯನ್ನೂ ತಮ್ಮೊಡನೆ ಚಿಕ್ಕಮಗಳೂರಿಗೆ ಒಯ್ಯಬೇಕಾದ್ದು ಇದು ಹಲವು ತೊಂದರೆ ಮತ್ತು ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. (ಇದೇ ಅಲ್ಲಿನ ಲಂಚಕ್ಕೂ ಒಂದು ಮುಖ್ಯ ಕಾರಣವಾಗಿದೆ.) ಈ ಕಿರಿಕಿರಿಯನ್ನು ತಪ್ಪಿಸಿ ಬೇರೇನಾದರೂ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೆ ಎಂದು ಜನ ಕೇಳುತ್ತಾರೆ.

ಕೊಪ್ಪ ಲಯನ್ಸ್ ಕ್ಲಬ್‌ಗೆ ಅರ್ಹ ಪ್ರಶಸ್ತಿ : "ಲಯನ್ಸ್ ಜಿಲ್ಲೆಯಲ್ಲೇ ಅತ್ಯುತ್ತಮ ಕ್ಲಬ್"

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ತನ್ನ ಇತಿಹಾಸದಲ್ಲಿ ಮೊದಲ ಬಾರಿಗೆ ಲಯನ್ಸ್‌ನ ಇಡೀ 324-ಡಿ 4 ಜಿಲ್ಲೆಯಲ್ಲೇ ಅತ್ಯುತ್ತಮ ಗ್ರಾಮಾಂತರ ಕ್ಲಬ್ ಎಂಬ ಪ್ರಶಸ್ತಿಗೆ ಪಾತ್ರವಾಗಿದೆ.

ರಕ್ತದಾನ, ಕುಟುಂಬಯೋಜನೆ, ಸಾಮೂಹಿಕ ವಿವಾಹ, ಕುಡಿಯುವ ನೀರು ಪೂರೈಕೆಗೆ ಸಹಾಯ, ಶೈಕ್ಷಣಿಕ ಸೇವೆಗಳ ವಿಸ್ತರಣೆ ಹಾಗೂ ನಿಧಿ ಸಂಗ್ರಹಣೆ—ಈ 6 ರಂಗಗಳಲ್ಲಿನ ಉತ್ತಮ ಸಾಧನೆಗಾಗಿ ಈ ಕ್ಲಬ್ 6 ಪ್ರಶಸ್ತಿ ಹಾಗೂ 3 ಪರ್ಯಾಯ ಫಲಕಗಳನ್ನು ಗೆದ್ದುಕೊಂಡಿದೆ.

ಕೊಪ್ಪದ ಕ್ಲಬ್ ಇಂಥ ಅರ್ಹ ಗೌರವವನ್ನು ಗಳಿಸುವಲ್ಲಿ, ಕಳೆದ ವರ್ಷದುದ್ದಕ್ಕೂ ಸತತವಾಗಿ ವಿವಿಧ ಸೇವಾ ಚಟುವಟಿಕೆಗಳನ್ನು ಯೋಜಿಸಿದ ಅದರ ಅಧ್ಯಕ್ಷ ಡಾ|| ಮೋಹನ್ ಬಿ.ಎಸ್. ಶೆಟ್ಟಿಯವರ ಚಿಂತನೆ ಮತ್ತು ಶ್ರಮ ಅಪಾರ. ಅವರ ಬಳಗದ ಎಲ್ಲರ ಪರವಾಗಿ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ನೂತನ ಪದಾಧಿಕಾರಿಗಳು

ಲಯನ್ಸ್ ಕ್ಲಬ್ಬಿನ ನೂತನ ವರ್ಷದ ಪದಾಧಿಕಾರಿಗಳಾಗಿ ಪ್ರಭಾಕರ ಕಲ್ಲೆ (ಅಧ್ಯಕ್ಷ), ರಾಮಣ್ಣ (ಕಾರ್ಯದರ್ಶಿ) ಮತ್ತು ಗಣಪತಿ ಭಟ್ (ಖಜಾಂಚಿ) ಇವರುಗಳು ಆಯ್ಕೆಯಾಗಿದ್ದಾರೆ.

ಶೃಂಗೇರಿ ತಾ||: ಖಾತೆಬದಲಾವಣೆಕಾರ್ಯಕ್ರಮ

ಶೃಂಗೇರಿ: ಈ ತಾಲ್ಲೂಕಿನಲ್ಲಿ 15.6.85 ರಿಂದ 20.8.85 ರ ವರೆಗೆ 'ಖಾತೆ ಬದಲಾವಣೆ' ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈವರೆಗೆ ಬಾಕಿ ಇರುವ ಅರ್ಜಿಗಳನ್ನೆಲ್ಲ ಈ ಅವಧಿಯಲ್ಲಿ ವಿಲೇವಾರಿ ಮಾಡಲಾಗುತ್ತದೆ. ಖಾತೆ ಬದಲಾವಣೆ ಅರ್ಜಿಗಳನ್ನು ಗ್ರಾಮ ಲೆಕ್ಕಿಗರಿಗೆ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರಿಗೆ 30-6-85 ರ ವರೆಗೆ ಸಲ್ಲಿಸಬಹುದು. 1-7-85 ರಿಂದ 30-7-85 ರ ವರೆಗೆ ಸಂಬಂಧಪಟ್ಟವರಿಗೆ ತಿಳುವಳಿಕೆ ಪತ್ರ ನೀಡುವಿಕೆ, 1-8-85 ರಿಂದ 10-8-85 ರ ವರೆಗೆ ಖಾತೆ ಬದಲಾವಣೆ ಬಗ್ಗೆ ಆದೇಶ ಮಾಡಿ ಮ್ಯುಟೇಶನ್ ಅಂಗೀಕರಿಸುವುದು ಮತ್ತು ವಿವಾದಾಸ್ಪದ ಪ್ರಕರಣಗಳನ್ನು ತಾ|| ಕಚೇರಿಗೆ ರವಾನಿಸುವಿಕೆ, 11.8.85 ರಿಂದ 17.8.85 ರ ವರೆಗೆ ತಾ|| ಕಚೇರಿಯಲ್ಲಿ ದಾಖಲಾತಿ ಬದಲಾವಣೆ, 30-8-85 ರಂದು ಜಿಲ್ಲಾಧಿಕಾರಿಗಳಿಗೆ ಅಂತಿಮ ವರದಿ ಸಲ್ಲಿಸಲಾಗುವುದು.

ಕೊಪ್ಪದಲ್ಲೊಂದು ಕೈಗಾರಿಕಾ ತರಬೇತಿ ಸಂಸ್ಥೆ:
ಉತ್ತಮ ತಾಂತ್ರಿಕ ಶಿಕ್ಷಣ ಸುಲಭದಲ್ಲಿ ಲಭ್ಯ

ಪುನಃ ಶಾಲೆ ಕಾಲೇಜುಗಳಿಗೆ ಸೇರುವ ಕಾಲ ಬಂದಿದೆ. ಈ ಸಮಯದಲ್ಲಿ ಯಾವ ಕೋರ್ಸಿಗೆ ಸೇರಬೇಕು, ಏನು ಕಲಿಯಬೇಕುಎಂದು ನಿರ್ಧರಿಸಲು ಕಷ್ಟವಾಗುವುದು ಸಹಜ.

ಪದವಿ [illegible]ದನ್ನು ಮುಂದುವರಿಸುವ ಶಕ್ತಿಯಿದ್ದ[illegible]ಧ್ಯದಲ್ಲಿಲ್ಲೋ ಫೇಲಾಗಿ ಬೇರೆ [illegible] ಮಾರ್ಗ ಹುಡುಕುವ[illegible] ಕೆಲಸ ಹುಡುಕುವ[illegible]ಈಗಲೇ ತಮ್ಮ ತಮ್ಮ ಹಡುಕಾಟದಲ್ಲಿರುತ್ತಾರೆ.

ಇಂಥ ಸಂದರ್ಭದಲ್ಲಿ, ನಾವು ಈ ಹಿಂದಿನಿಂದಲೂ ಹೇಳುತ್ತ ಬಂದಿರುವಂತೆ ಯಾವುದಾದರೂ ತಾಂತ್ರಿಕ ಶಿಕ್ಷಣಕ್ಕೆ ಸೇರುವುದು ಬಹಳ ಉತ್ತಮವಾದ ಮಾರ್ಗ.

ಯಾವ ದಿಕ್ಕು-ಗುರಿಯಿಲ್ಲದೆ, ಮನೆಯಲ್ಲಿದ್ದು ಕೆಲಸ ಮಾಡಲಾರದ ಎಡೆಗಳ್ಳತನಕ್ಕೋ ಎಂಬಂತೆ, ಯಾವ ಜವಾಬ್ದಾರಿಯೂ ಇಲ್ಲದವರಂತೆ ಪಿಯುಸಿ, ಡಿಗ್ರಿ ಮುಂತಾದ ತರಗತಿಗಳಿಗೆ ಸೇರಿ ಹಣ, ಸಮಯ ಎಲ್ಲಾ ಹಾಳುಮಾಡಿಕೊಂಡುಕಡೆಗೆ ವಿದ್ಯಾವಂತ ನಿರುದ್ಯೋಗಿ ಎನ್ನಿಸಿಕೊಳ್ಳುವುದಕ್ಕಿಂತ ಎಷ್ಟಾದರೂ ಕಷ್ಟಪಟ್ಟು ಯಾವುದಾದರೂ ತಾಂತ್ರಿಕ ಶಿಕ್ಷಣ ಪಡೆಯುವುದು ಎಷ್ಟು ಉಪಯುಕ್ತ ಎಂಬುದನ್ನು ಯೋಚಿಸಿ ಎಂದು ಮತ್ತೊಮ್ಮೆ ಹೇಳುತ್ತೇವೆ.

ಇಂಥದೊಂದು ಶಿಕ್ಷಣದ ಪ್ರಯೋಜನವನ್ನು ಬಿಡಿಸಿ ಹೇಳುವ ಅವಶ್ಯಕತೆ ಕಾಣುವುದಿಲ್ಲ. ಸ್ವತಂತ್ರವಾಗಿ ಬದುಕಬೇಕು, ಯಾರಿಗೂ ಹೊರೆಯಾಗಬಾರದು, ಯಾರ ಹತ್ತಿರವೂ ಕೈ ಹೊಸೆಯುವ ಪ್ರಸಂಗ ಬರಬಾರದು ಎಂಬ ವ್ಯಕ್ತಿತ್ವ ಇರುವಂಥವರಿಗೆ ಈ ಮಾರ್ಗ ಮಾತ್ರ ಸರಿಯಾದುದು. ಇಂಥ ಶಿಕ್ಷಣವಿದ್ದವರಿಗೆ ದೇಶದೊಳಗಾಗಲಿ, ಹೊರಗಡೆಯಾಗಲಿ, ವಿಪುಲ ಅವಕಾಶಗಳಿವೆ. ಅಕಸ್ಮಾತ್ ಹಾಗೆ ಉದ್ಯೋಗ ದೊರೆಯದಿದ್ದರೂ ಸ್ವಂತವಾಗಿ ವೃತ್ತಿಯಲ್ಲಿ ತೊಡಗಲು ಸಾಧ್ಯವಾಗುತ್ತದೆ.

ಇಂಥ ಶಿಕ್ಷಣಕ್ಕೆ ದೂರದ ಯಾವುದಾದರೂ ಊರಿಗೆ ಹೋಗಬೇಕಾದ ಪರಿಸ್ಥಿತಿ ಶೃಂಗೇರಿ, ಕೊಪ್ಪ, ನ.ರಾ. ಪುರ, ತೀರ್ಥಹಳ್ಳಿ ಭಾಗಗಳವರಿಗೆ ಈವರೆಗೆ ಇತ್ತು. ಈಗ ಕೊಪ್ಪದಲ್ಲಿ ಇಂಥದೊಂದು ಶಿಕ್ಷಣ ಸಂಸ್ಥೆ– 'ಕರ್ನಾಟಕ ಕೈಗಾರಿಕೆಯ ಶಿಕ್ಷಣ ಸಂಸ್ಥೆ'– ಆರಂಭವಾಗಿದೆ. ಇಲ್ಲಿ ಒಂಬತ್ತು ತರದ ಕೋರ್ಸುಗಳಿಗೆ ಶಿಕ್ಷಣ ನೀಡಲಾಗುತ್ತದೆ. ಎಲ್ಲವೂ ಕಡಿಮೆ ಅವಧಿಯ ಕೋರ್ಸುಗಳು. ಹೆಚ್ಚೆಂದರೆ 10 ತಿಂಗಳ ಅವಧಿಯವು. ಈಗಾಗಲೇ ರೇಡಿಯೋ ತಂತ್ರಜ್ಞಾನದಲ್ಲಿ ಒಂದು ತಂಡ ತರಬೇತಿಯ ಅಂತಿಮ ಹಂತದಲ್ಲಿದೆ. ಮುಂದಿನ ಬ್ಯಾಚ್‌ಗಳು ಜುಲೈ ಮೊದಲ

(ಮೂರನೇ ಪುಟಕ್ಕೆ)

'ಜನಪರ ಸರ್ಕಾರ'ದ ಬಡವರ ಕಾಳಜಿ ಈ ಪರಿ!

ಕಳೆದ ತಿಂಗಳು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಉನ್ನತ ನಿಯೋಗವೊಂದು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ರಾಜ್ಯದ ದಲಿತ ವರ್ಗಗಳ ಬಹುಮುಖ ಸಮಸ್ಯೆಗಳ ಬಗ್ಗೆ ಚರ್ಚಿಸಿತು. ಚರ್ಚೆಯಲ್ಲಿ ಗೃಹಮಂತ್ರಿ ಬಿ. ರಾಚಯ್ಯ ಮತ್ತು ಕಂದಾಯ ಮಂತ್ರಿ ಬೊಮ್ಮಾಯಿ ಅವರುಗಳೂ ಹಾಜರಿದ್ದರು.

ದಲಿತರ ಅತಿ ಮುಖ್ಯ ಸಮಸ್ಯೆಗಳಲ್ಲೊಂದಾದ ಭೂಮಿ ನೀಡಿಕೆಯ ಪ್ರಶ್ನೆ ಸಹಜವಾಗಿಯೇ ಚರ್ಚೆಗೆ ಬಂದಾಗ, ದಲಿತ ಸಂಘರ್ಷ ಸಮಿತಿಯವರು ಹೇಳಿದರು–"ನೋಡಿ ಹೆಗಡೆಯವರೇ, ರಾಜ್ಯದಲ್ಲಿ ಭೂಮಾಲೀಕರು ಅಪಾರವಾಗಿ ಒತ್ತುವರಿ ಮಾಡಿದ್ದಾರೆ. ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗ– ಈ ನಾಲ್ಕು ಜಿಲ್ಲೆಗಳಲ್ಲೇ, ಸರ್ಕಾರದ ಲೆಕ್ಕದ ಪ್ರಕಾರವೇ 56 ಸಾವಿರ ಎಕರೆ ಭೂಮಿ ಒತ್ತುವರಿಆಗಿದೆ. ಕಡಿದಾಳು ಮಂಜಪ್ಪನವರ ಕಾಲದಿಂದಲೂ ಭೂಮಾಲೀಕರ ಒತ್ತುವರಿ ಭೂಮಿ ತೆರವು ಮಾಡಿಸುವ ಮಾತು ಸಾಗುತ್ತಲೇ ಇದೆ. ಈಗ, ಜನಪರವಾದ ಕೆಲಸಗಳನ್ನು ಮಾಡುತ್ತೇವೆನ್ನುವ ನೀವುಗಳಾದರೂ ಇಂಥ ಕ್ರಮ ಕೈಗೊಂಡು ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ನೀಡಿ."

ಅದಕ್ಕೆ ಹೆಗಡೆಯವರು, "ಈ ಖುಲ್ಲಾ ಮಾಡಿಸುವ ಕೆಲಸ ಯಾವ ಸರ್ಕಾರದ ಕೈಲೂ ಆಗಲಿಲ್ಲ. ಆದ್ದರಿಂದ ಅದರ ಬದಲು ನಾವು ಅವರಿಗೆಲ್ಲ ಗರಿಷ್ಠ ಪ್ರಮಾಣದಲ್ಲಿ ಫೈನ್ ಹಾಕುತ್ತಿದ್ದೇವೆ" ಎಂದರು.

"ಹೌದು ಸ್ವಾಮಿ, ಇದರಿಂದ ನಿಮ್ಮ ಸರ್ಕಾರದ ಬೊಕ್ಕಸಕ್ಕೆ ಹಣ ಮಾಡಿಕೊಳ್ಳುತ್ತೀರಿ. ಆದರೆ, ಸಾವಿರಾರು ಜನ ಬಡವರಿಗೆ, ನಿರ್ಗತಿಕ ಭೂರಹಿತರಿಗೆ ಇದರಿಂದ ಪ್ರಯೋಜನವೇನು? ಅವರ ಭೂಮಿ ಸಮಸ್ಯೆ ಹೇಗೆ ಬಗೆಹರಿಸುತ್ತೀರಿ? ಈ ಭೂಮಾಲೀಕರಿಗೇನು, ಎಕರೆಗೆ 40 ಸಾವಿರ, 50 ಸಾವಿರ ದಂಡ ಹಾಕಿದರೂ ಕಟ್ಟುತ್ತಾರೆ. ಅಷ್ಟು ಲಾಭವಿದೆ. ಬಡವರಿಗೆ ಭೂಮಿ ಎಲ್ಲಿಂದ ಕೊಡುತ್ತೀರಿ?"

ಈ ಮಾತಿಗೆ ಸರ್ಕಾರದ ಬಳಿ ಉತ್ತರವಿರಲಿಲ್ಲ. ತ್ರಿಮೂರ್ತಿಗಳೂ ಮಿಕಿ ಮಿಕಿ ನೋಡಿದರು.

ಆಗ ಚಿಕ್ಕಮಗಳೂರು ಜಿಲ್ಲಾ ಸಂಚಾಲಕ ಎಂ.ಡಿ. ಗಂಗಯ್ಯ ಎದ್ದು ಹೇಳಿದರು– "ಹಾಗಾದರೆ ಈ ಕೆಲಸ ದಲಿತ ಸಂಘರ್ಷ ಸಮಿತಿಗೆ ವಹಿಸಿ. ನಾವು ಇಂಥ ಒತ್ತುವರಿಯನ್ನೆಲ್ಲ ಬಿಡಿಸಿ ಭೂರಹಿತರಿಗೆ ಹಂಚುತ್ತೇವೆ. ನೀವು ಆಯಾ ಜಿಲ್ಲೆಯ ಎಸ್ಪಿಗಳಿಗೆ, ಹೀಗೆ ಭೂಮಿ ಹಂಚುವಾಗ ರಕ್ಷಣೆ ಕೊಡುವಂತೆ ಆದೇಶ ನೀಡಿ ಸಾಕು".

ಈ ಮಾತು ಬೊಮ್ಮಾಯಿಯವರಿಗೆ ಬಿಸಿ ಏರಿಸಿತೆನ್ನಿಸುತ್ತದೆ. ಅವರು "ಏನ್ರೀ, ಸರಕಾರವೇ ಇಲ್ಲದ ಹಾಗೆ ಮಾತಾಡ್ತೀರಲ್ರೀ?" ಎಂದು ಸ್ವಲ್ಪ ಜೋರಾಗಲು ನೋಡಿದರು.

ಅದಕ್ಕೆ ಗಂಗಯ್ಯ, "ನಾವು ನಿಮ್ಮ ಸರ್ಕಾರದ ಎಸ್ಪಿಗಳಿಂದಲೇ ಪೋಲೀಸ್ ರಕ್ಷಣೆ ಕೊಡಿಸಿ ಎಂದು ಕೇಳುತ್ತಿದ್ದೇವಲ್ಲ. ನೀವೇ ತಾನೇ ಸರ್ಕಾರದ ಕೈಲಿ ಈ ಕೆಲಸ ಆಗೋಲ್ಲ ಅಂದವರು? ಸರ್ಕಾರಕ್ಕೆ ಬಡಜನಗಳ ಬಗ್ಗೆ ಸರಿಯಾದ ಏನಾದರೂ ಕಾರ್ಯಕ್ರಮ ಮಾಡಬೇಕೆಂದಿದ್ದರೆ ಈ ಕೆಲಸ ಮಾಡಿ" ಎಂದರು.

ಮತ್ತೆ ಸರ್ಕಾರದ ಬಳಿ ಉತ್ತರವಿಲ್ಲ. ಮೂವರೂ ಮಾತಾಡಲಿಲ್ಲ. ಈ ಸರ್ಕಾರ ಈ ದೇಶದ ಮೂಲಭೂತ ಸಮಸ್ಯೆಯಾದ ಬಡವರಿಗೆ ಭೂಮಿ ನೀಡಿಕೆಯ ವಿಷಯದಲ್ಲಿ ಏನೂ ಮಾಡಲಾರದು.

ಈ ಸರ್ಕಾರ ಮಾತ್ರವಲ್ಲ. ಈ[illegible] ರವನ್ನು ನಡೆಸುತ್ತಿರುವ ವರ್ಗಗಳು ಕಾಲಕಾಲಕ್ಕೆ ಬೇರೆ ಬೇರೆ ರೂಪದಲ್ಲಿ, ಬಣ್ಣದಲ್ಲಿ ಕಟ್ಟಿ ನಿಲ್ಲಿಸುವ ಯಾವ ಸರ್ಕಾರವೂ ಬಡವರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲಾರದು.

ಈ ಸತ್ಯ ದಲಿತ ಸಂಘರ್ಷ ಸಮಿತಿಗಂತೂ ಖಂಡಿತ ಗೊತ್ತಿದೆ. ಈ ದೇಶದ ಬಡವರಿಗೂ ಈಗೀಗ ಹೆಚ್ಚೆಚ್ಚು ಅರ್ಥವಾಗುತ್ತಿದೆ.

ಪುಣ್ಯಕ್ಕೆ ಬಚಾವ್....

ನಾಲ್ಕೈದು ದಿನದಿಂದ ಹಿಡಿದ ಮಳೆ ಬಿಡದೆ ಚಳಿಗೆ ಹೆದರಿ, ಮುದುರಿ ಮನೆಯಲ್ಲೇ ಉಳಿದಿದ್ದ ಮಲ್ಲನಿಗೆ ಹರಟೆಯಿಲ್ಲದೆ ಇನ್ನು ಕಾಲ ಹಾಕುವುದು ಆಗದೆ ಮಳೆಯಲ್ಲೇ ಕೊಡೆ ಹಿಡಿದು ಹೊರಟ.

ಟೌನ್‌ಹಾಲ್ ಬಳಿ ಬರುವಾಗ, ಹುಯ್ಯುವ ಮಳೆಯಲ್ಲೂ ಕೆಲವು ಕಾರುಗಳು, ಹಲವು ಬೈಕುಗಳು ಮೈ ತೊಳೆದುಕೊಳ್ಳುತ್ತಿದ್ದವು. ಜನರ ಗುಂಪಿತ್ತು. ಧ್ವನಿವರ್ಧಕದಲ್ಲಿ ಏನೋ ಕೇಳುತ್ತಿತ್ತು.

"ಇಲ್ಲೂ ಮದುವೇನಾ?" ಎಂದು ಯೋಚಿಸುತ್ತಿದ್ದಂತೆ ಮೊನ್ನೆ ಕಲ್ಯಾಣ ಮಂಟಪದಲ್ಲಿ ನಡೆದ ಒಂದು ಭರ್ಜರಿ ಮದುವೆಯ ಸಂದರ್ಭ ಅವನ ಕಣ್ಣ ಮುಂದೆ ಬಂತು. ಏನು ಅದ್ದೂರಿ, ಏನು ವೈಭವ! ಯಾವ ಪುಣ್ಯಾತ್ಮರ ಮನೆಯ ಮದುವೇನೋ ಅದು. 45 ಕಾರು-ಜೀಪುಗಳು ಬಂದು ರಸ್ತೆಯ ಎರಡೂ ಕಡೆ ತಂಗಿದ್ದವು. ಆ ದಾರಿಯಲ್ಲಿ ಬಂದ ಇತರ ವಾಹನಗಳು–ಲೋಡಾದ ಲಾರಿಗಳೂ ಸಹ–ಏರಿನಲ್ಲಿ ಹಿಮ್ಮುಖವಾಗಿ ಹೋಗಿ ಪಾರಾಗುತ್ತಿದ್ದವು. ಆ ದಾರಿಯಲ್ಲಿ ಲಾರಿಗಳು ಬರಬಹುದೋ ಇಲ್ಲವೋ ಮಲ್ಲನಿಗೆ ಗೊತ್ತಿಲ್ಲ. ಆದರೆ ಲಾರಿಗಳ ಪರದಾಟ ಮಾತ್ರ ಅವನಿಗೆ ಅಯ್ಯೋ ಅನ್ನಿಸಿತ್ತು.

ಇದೆಲ್ಲ ಯೋಚಿಸುತ್ತಿದ್ದಂತೆ ಮಲ್ಲನ ಹೆಜ್ಜೆಗಳು ಅವನನ್ನು ಸಭೆಯ ಕಡೆಗೇ ಒಯ್ದವು. ಧ್ವನಿವರ್ಧಕದಲ್ಲಿ ಯಾರೋ ಕುಯ್ದುಳಿಸುತ್ತಿದ್ದರು. ಹಣಿಕಿ ನೋಡಿದ. ಮಂತ್ರಿಗಳು!

ಹರಟೆ ಕಟ್ಟೆ

"ಹೋ, ನಮಸ್ಕಾರ ಸ್ವಾಮಿ" ಎಂದ ಮಲ್ಲ ಮನಸ್ಸಿನಲ್ಲೇ.

"....ನಮ್ಮ ಸರ್ಕಾರ ಬಡವರಿಗಾಗಿ ಏನೂ ಮಾಡಿಲ್ಲ ಎಂದು ಕೆಲವರು ದೂರುತ್ತಿದ್ದಾರೆ. ಇದು ಸರಿಯಾ ನೀವೇ ಯೋಚನೆ ಮಾಡಿ. ನಾವು ನಿಮಗೆ ಹಿಂದಿನ ಯಾವ ಸರ್ಕಾರವೂ ಕೊಡದಿದ್ದುದನ್ನೆಲ್ಲ ಕೊಟ್ಟಿದ್ದೇವೆ, ಇನ್ನೂ ಕೊಡುತ್ತಿದ್ದೇವೆ. ಬಡವರಿಗೆ ಸೈಟುಗಳು, ಮನೆಗಳು, ಬಾಣಂತಿಯರಿಗೆ ಭತ್ಯ, ವಿಧವೆಯರಿಗೆ ಮಾಸಾಶನ, ಮಕ್ಕಳ ಸ್ಕೂಲು ಪುಸ್ತಕ.... ಒಂದೇ ಎರಡೆ? ಇದೆಲ್ಲ ಏನು ಶ್ರೀಮಂತರಿಗಾಗಿ ಕೊಟ್ಟಿದ್ದೇವೆಯೆ? ಇದನ್ನೆಲ್ಲ ಯಾವ ಸರ್ಕಾರ ಕೊಟ್ಟಿತ್ತು? ವೃದ್ಧಾಪ್ಯ ವೇತನ ಹಿಂದೆ ಎಷ್ಟು ಬರುತ್ತಿತ್ತು, ಈಗ ಎಷ್ಟಾಗಿದೆ, ನೀವೇ ಹೇಳಿ? ಹ್ಞಾ, ನಲವತ್ತಿದ್ದದ್ದು ಐವತ್ತಕ್ಕೆ ಏರಿಸಿದ್ದೇವೆ. ಯಾವ ಸರ್ಕಾರ ಏರಿಸಿತ್ತು? ಈ ಸಭೆಯಲ್ಲಿ ಇವತ್ತು ಇಷ್ಟೆಲ್ಲ ಜನರಿಗೆ ಸಾಲ ಹಂಚಿದ್ದೇವಲ್ಲ, ಇದೆಲ್ಲ ಬಡವರಿಗಾಗಿ ಅಲ್ಲವೇನು? ಇನ್ನೂ ಬೇಕಾದರೆ ಕೊಡುತ್ತೇವೆ. ನಿಮಗೆ ಬಡವರಿಗೆ ಯಾವುದಕ್ಕೂ ಕಮ್ಮಿ ಮಾಡೊಲ್ಲ. ಎಷ್ಟು ಬೇಕಾದರೂ ಕೊಡ್ತೇವೆ...."

ಮಂತ್ರಿಗಳ ಭಾಷಣ ಸಾಗುತ್ತಿದ್ದಂತೆ ಮಲ್ಲ ಭೂಮಿಗಿಳಿದು ಹೋದ! ಅಲ್ಲಾ, ಇವರು ಹೀಗೆ ಇದ್ದುದನ್ನೆಲ್ಲ ಬಡವರಿಗೇ ಕೊಟ್ಟು ಬಿಟ್ಟರೆ ಶ್ರೀಮಂತರ ಗತಿಯೇನು? ಈ ದೇಶದಲ್ಲೇನು ಶ್ರೀಮಂತರು ಬದುಕಬೇಕೋ ಬೇಡವೋ, ಹ್ಞಾ? ಏನು ಕೇಡು ಬಂತಪ್ಪ.... ಎನ್ನುತ್ತ ಮಲ್ಲ ತಲೆಯ ಮೇಲೆ ಕೈ ಹೊತ್ತ.

ಆ ಕೈ ತಲೆಗೆ ತಾಗುತ್ತಲೇ ಜ್ಞಾಪಕಕ್ಕೆ ಬಂತು–ಹ್ಞಾ, ಶ್ರೀಮಂತರಿಗೆ ಸದ್ಯ ಜಮೀನೊಂದಿದೆ. ಯಾರು ಬಂದರೂ ಅವರಿಂದ ಅದನ್ನೊಂದು ಕಿತ್ತುಕೊಳ್ಳಲು ಆಗುವುದಿಲ್ಲ. ಹಾಗೂ ಸದ್ಯದ ಭವಿಷ್ಯದಲ್ಲೇನೂ ಕೊರತೆ ಬಾರದಷ್ಟು ಅಕ್ಕ-ಪಕ್ಕ ಇದ್ದುದಕ್ಕೆಲ್ಲ ಬೇಲಿ ಹಾಕಿಕೊಂಡಿದ್ದಾರೆ. (ಯಾರಪ್ಪನ ಗಂಟು—ಸರ್ಕಾರಿ ಜಾಗ ಅಲ್ವೇನು? ಅವರೂ ಈ ಸರ್ಕಾರದ ಪ್ರಜೆಗಳಲ್ವೇನು?) ಇದರ ಮೇಲೆ ಇನ್ನು ವ್ಯಾಪಾರ, ಉದ್ಯಮ, ಕೈಗಾರಿಕೆ, ಉನ್ನತ ಉದ್ಯೋಗ....ಇತ್ಯಾದಿಗೆಲ್ಲ ಹೇಗೂ ಬಡವರು ಹತ್ತಿರ ಕೂಡ ಸುಳಿಯುವಂತಿಲ್ಲ.

"ಪುಣ್ಯಕ್ಕೆ ಬಚಾವ್...."

ಎಂದು ಅರ್ಥ ಹಗುರವಾದ ಹೃದಯದೊಡನೆ ಮಲ್ಲ ಚಪ್ಪು ಕೊಡೆ ಬಿಡಿಸಿದ.

—ಹರಟೆ ಮಲ್ಲ

ಪುರಸಭೆ ಬಾಡಿಗೆದಾರರ ಹಗರಣ: ಒಂದು ಒಳನೋಟ

19.6.85 ರಂದು ಅಂತಿಮವಾಗಿ ಇತ್ಯರ್ಥಗೊಂಡ ಪುರಸಭೆಯ 10 ಜನ ಬಾಡಿಗೆದಾರರ ಹಗರಣ ಪುರಸಭೆಯಂಥ ಒಂದು ಸಾರ್ವಜನಿಕ ವ್ಯವಸ್ಥೆಯನ್ನು ಮೋಸಗಾರರು, ನೀತಿ-ನಿಯತ್ತುಗಳಿಲ್ಲದವರು ಹೇಗೆ ಬೇಕಾದರೂ ಲೂಟಿ ಮಾಡಿಕೊಳ್ಳಬಹುದೆಂದು-ತಿಳಿದಿರುವ, ಅದರಂತೆ ವರ್ತಿಸುವ ನಡವಳಿಕೆಯ ಒಂದು ಉತ್ತಮ ಚಿತ್ರಣವನ್ನೊದಗಿಸುತ್ತದೆ.

ಅನೀತಿಯ ಪರಂಪರೆ

ಹಾಗೆ ನೋಡಿದರೆ ಕೊಪ್ಪ ಪುರಸಭೆಯ ಇತಿಹಾಸವೇ ಸಾರ್ವಜನಿಕ ಅನೀತಿಯ ಒಂದು ದೀರ್ಘ ಕತೆಯಾಗಿ ಕಂಡು ಬರುತ್ತದೆ. ಈ ಪುರಸಭೆಯ ಆರಂಭದಿಂದ ಇಲ್ಲಿಯವರೆಗೂ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಕೌನ್ಸಿಲರ್‌ಗಳು ತಮ್ಮ ಸ್ಥಾನದ ಪ್ರಭಾವದಿಂದ ಪುರಸಭೆಯ ವ್ಯಾಪ್ತಿಯಲ್ಲಿ ಒಳ್ಳೊಳ್ಳೆಯ ಆಸ್ತಿ ಮಾಡಿಕೊಂಡಿರುವುದೇ ಒಂದು ಸಾಮಾನ್ಯ ನಡವಳಿಕೆಯಾಗಿ ಕಾಣುತ್ತದೆ. ಇದಕ್ಕೆ ಎಲ್ಲೋ ಕೆಲವು ಅಪವಾದಗಳು ಸಿಗಬಹುದು. ಈಗಿನ ಕೌನ್ಸಿಲ್ ಈ ದೃಷ್ಟಿಯಿಂದ ಸ್ವಲ್ಪ ಬೇರೆ ರೀತಿ ಕಾಣುತ್ತದಾದರೂ ಇದರಲ್ಲೂ ಅಂಥ ಬೀಜಗಳಿವೆ. ಅವಕಾಶ ಸಿಕ್ಕರೆ ಅವೂ ಮೊಳಕೆಯೊಡೆದು ಬೆಳೆದು ಹೆಮ್ಮರವಾಗುವಂಥವೇ.

ಹಗರಣದ ಹಿನ್ನೆಲೆ

ಪ್ರಸ್ತುತ ಈ ವಿವಾದಕ್ಕೆ ಬಂದರೆ, ಈ ಮಳಿಗೆಗಳ ಬಾಡಿಗೆ ಹಕ್ಕನ್ನು 3 ವರ್ಷಕ್ಕೊಮ್ಮೆ ಹರಾಜು ಹಾಕಬೇಕೆಂದು ಪುರಸಭೆಯ ನಿಬಂಧನೆ. ಆದರೆ ಬಹಳ ವರ್ಷ ಹಿಂದಿನಿಂದಲೂ ಕೌನ್ಸಿಲ್‌ಗಳು ಅದೇ ಜನರನ್ನೇ ಬಾಡಿಗೆದಾರರಾಗಿ ಮುಂದುವರಿಸಿಕೊಂಡು ಬಂದಿದ್ದವು. ಅವರು ಕೊಡುತ್ತಿದ್ದ ಬಾಡಿಗೆ ಕೇವಲ 70 ರೂ. 1980 ರಲ್ಲಿ ಬಾಡಿಗೆ ಕರಾರು ಮುಗಿಯುವುದಿತ್ತು. ಆಗ ಹಲವು ಜನ ಮಳಿಗೆಗಳನ್ನು ಹರಾಜು ಹಾಕಬೇಕೆಂದು ಒತ್ತಾಯ ತಂದಿದ್ದರು.

ಆದರೂ ಕೌನ್ಸಿಲ್ ಇವರುಗಳ ವಿಷಯದಲ್ಲಿ ಬಹಳ ಅನುಕಂಪದಿಂದ ವರ್ತಿಸಿ, 1-4-80 ರಿಂದ ಬಾಡಿಗೆಯನ್ನು 175 ರೂ. ಗೆ ನಿಗದಿಮಾಡಿ ಅವರಿಗೇ ಮುಂದುವರಿಸಲು ನಿರ್ಣಯಿಸಿತು. ಬಹುಶಃ ಅವರುಗಳು ಮನವಿ ಮಾಡಿದ್ದರೆ ಬಾಡಿಗೆ ಇನ್ನೂ ಸ್ವಲ್ಪ ಕಮ್ಮಿ ಆಗುತ್ತಿತ್ತು.

ಆದರೆ ಅವರುಗಳು ಸೀದ ಪುರಸಭೆಗೆ ಲಾಯರ್ ನೋಟೀಸ್ ಕೊಡಿಸಿದರು. ಈ ಹಗರಣದಲ್ಲೇ ಸ್ವಲ್ಪ ಕಾಲ ಕಳೆಯಿತು. ಆದರೆ ವಿವಾದ ಬಗೆಹರಿಯಲಿಲ್ಲ. ಮಾರ್ಚ್ 81 ರಲ್ಲಿ ಪುರಸಭೆ ಮಳಿಗೆಗಳ ಹರಾಜು ಹಾಕಿದಾಗ ಹರಾಜಿನ ದಿನ ಬಾಡಿಗೆದಾರರು ಹರಾಜಿಗೆ ನಿಬಂಧನಾ ಪೂರ್ವಕ (ಕಂಡಿಶನಲ್) ತಡೆಯಾಜ್ಞೆ ತಂದರು. 175 ರೂ. ಗಳಂತೆ 6 ತಿಂಗಳ ಠೇವಣಿ ಕಟ್ಟಿ ಅದೇ ಬಾಡಿಗೆಯ ಮೇಲೆ ಅವರುಗಳು ಪ್ರಕರಣ ಇತ್ಯರ್ಥವಾಗುವವರೆಗೆ ಮುಂದುವರಿಯಬೇಕೆಂಬುದು ನಿಬಂಧನೆಯಾಗಿತ್ತು.

ಪುರಸಭೆ ನ್ಯಾಯಾಲಯದ ಮೊರೆ ಹೊಕ್ಕು, ಈ ಮಳಿಗೆಗಳಿಗೆ ಈಗ ಕನಿಷ್ಠ ತಿಂಗಳಿಗೆ 250 ರೂ. ಬಾಡಿಗೆ ಹಾಗೂ ಅದಕ್ಕೆ ತಕ್ಕಷ್ಟು ಠೇವಣಿ ಬರುವಂತಿದ್ದು, ಪುರಸಭೆಯ ಆದಾಯದ ದೃಷ್ಟಿಯಿಂದ ಸ್ಟೇ ತೆರವು ಮಾಡಿ ಹರಾಜಿಗೆ ಅವಕಾಶ ಕೊಡಬೇಕೆಂದು ಕೋರಿತು. ಆಗ ಪುನಃ ಹೈಕೋರ್ಟ್ 1.4.81 ರಿಂದ 250 ರೂ. ನಂತೆ 6 ತಿಂಗಳ ಬಾಡಿಗೆ ಠೇವಣಿ ಕಟ್ಟಿ, ಅದೇ ರೀತಿ ಬಾಡಿಗೆ ಕೊಟ್ಟುಕೊಂಡು ಪ್ರಕರಣ ಇತ್ಯರ್ಥವಾಗುವವರೆಗೂ ಮುಂದುವರಿಯಬೇಕೆಂದು ಬಾಡಿಗೆದಾರರಿಗೆ ತಿಳಿಸಿತು. ಆದರೆ ಇವರ್ಯಾರೂ ಬಾಡಿಗೆ ಕಟ್ಟಲಿಲ್ಲ. ಠಾಣೆಗೆ ಕರೆಸಿ
ಪುರಸಭೆ ಪ್ರಕರಣ ಇತ್ಯರ್ಥಕ್ಕೆ ಬಿಡಲಾಗಿದೆ.
ಯಿಸಿದ್ದರಿಂದ ಹೈಕೋರ್ಟ್ ಪ್ರ ದೂರುಗಳು
ರ್ಥಗೊಳಿಸಿ ತಡೆಯಾಜ್ಞೆ ತೆರವು.
ಬಾಡಿಗೆದಾರರು ಬಾಕಿ ಪೂರ್ತಿ ಕಟ್ಟಿ .

(ನಾಲ್ಕನೇ ಪುಟಕ್ಕೆ)

ರಿಸರ್ವ್ ಬ್ಯಾಂಕಿನ ಎಚ್ಚರಿಕೆ

ಹಣಕಾಸು ವ್ಯವಹಾರದ ಮತ್ತು ಇತರ ಬ್ಯಾಂಕಿಂಗೇತರ (ನಾನ್-ಬ್ಯಾಂಕಿಂಗ್) ಕಂಪನಿಗಳು ಮತ್ತು ಇತರ ಅಂಥ ಸಂಸ್ಥೆಗಳ ಕುರಿತಂತೆ 22.6.85 ರಂದು ಭಾರತೀಯ ರಿಸರ್ವ್ ಬ್ಯಾಂಕ್ ಎಚ್ಚರಿಕೆಯ ಪ್ರಕಟಣೆಯೊಂದನ್ನು ಹೊರಡಿಸಿದೆ. ಅದರ ಮುಖ್ಯಾಂಶವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ಬಹುಮಾನ ಚೀಟಿ ಯೋಜನೆ', 'ಉಳಿತಾಯ ಯೋಜನೆ'ಗಳೆಂದು ಕರೆಯಲ್ಪಡುವ ವಹಿವಾಟುಗಳನ್ನು ನಡೆಸುತ್ತಿರುವ ಹಲವು ನಿರ್ದಿಷ್ಟ ಕಂಪನಿಗಳು ಮತ್ತು ಸಂಸ್ಥೆಗಳು ಜಾಹೀರಾತು ಅಥವಾ ತಮ್ಮ ಏಜೆಂಟರುಗಳ ಮೂಲಕ, ತಮ್ಮ ವ್ಯವಹಾರಕ್ಕೆ ರಿಸರ್ವ್ ಬ್ಯಾಂಕಿನ ಅನುಮತಿ ಇದೆ ಎಂತಲೂ ಅವರು ಸಂಗ್ರಹಿಸಿದ ವಂತಿಗೆಗಳನ್ನು ರಿಸರ್ವ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವುದಾಗಿಯೂ ಅಥವಾ ಠೇವಣಿದಾರರಿಗೆ ಹಣವನ್ನು ಮರುಪಾವತಿ ಮಾಡುವ ಬಗ್ಗೆ ರಿಸರ್ವ್ ಬ್ಯಾಂಕಿನ ಖಾತರಿ ಇದೆ ಎಂಬ ಅರ್ಥ ಬರುವ ರೀತಿಯಲ್ಲೂ ತಪ್ಪು ಪ್ರತಿಪಾದನೆಗಳನ್ನು ಮಾಡುತ್ತಿರುವುದು ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂದಿದೆ.

ರಿಸರ್ವ್ ಬ್ಯಾಂಕ್ ಅಂತಹ ಯೋಜನೆಗಳಿಗೆ ಅನುಮತಿ ನೀಡುವುದಿಲ್ಲ. ಠೇವಣಿದಾರರಿಂದ ಸಂಗ್ರಹಿಸಿದ ಮೊತ್ತದ ಮರುಪಾವತಿ ಬಗ್ಗೆ ಖಾತರಿಯನ್ನೂ ನೀಡುವುದಿಲ್ಲ. ಅಂಥ ಕಂಪನಿ/ಸಂಸ್ಥೆಗಳು ರಿಸರ್ವ್ ಬ್ಯಾಂಕಿನಲ್ಲಿ ಯಾವುದೇ ಠೇವಣಿಯನ್ನೂ ಇಟ್ಟಿರುವುದಿಲ್ಲ. ಬಹುಮಾನ ಚೀಟಿ ಮತ್ತು ಹಣ ಚಲಾವಣೆ ಯೋಜನೆಗಳ (ನಿಷೇಧ) ಅಧಿನಿಯಮ 1978-ಇದರನ್ವಯ ನಿಷೇಧಿಸಲ್ಪಟ್ಟ ಕಂಪನಿಗಳ ಮೇಲೆ ಯಾವುದೇ ಉಸ್ತುವಾರಿಯನ್ನಾಗಲಿ, ನಿಯಂತ್ರಣವನ್ನಾಗಲಿ ನಡೆಸುವುದಿಲ್ಲ; ಈ ಅಧಿನಿಯಮ ಜಾರಿಗೆ ಬಂದ ನಂತರ ಬಹುಮಾನ ಚೀಟಿಗಳನ್ನು ಮತ್ತು ಹಣ ಚಲಾವಣೆ ಯೋಜನೆಗಳನ್ನು ನಡೆಸುವುದನ್ನು ಪೂರ್ಣವಾಗಿ ನಿಷೇಧಿಸಲಾಗಿದೆ. ಆದ್ದರಿಂದ ಇಂತಹ ಯಾವುದೇ ಸುಳ್ಳು ಪ್ರಚಾರಕ್ಕೆ ಮರುಳಾಗದಿರುವಂತೆ ಸಾರ್ವಜನಿಕರಿಗೆ ಈ ಪ್ರಕಟಣೆ ಎಚ್ಚರಿಕೆ ನೀಡಿದೆ. ಇತ್ತೀಚೆಗೆ ಹೆಚ್ಚುತ್ತಿರುವ ವಿವಿಧ ವೇಷದ ಇಂಥ ಯೋಜನೆಗಳ ಬಗ್ಗೆ ಜನ ಜಾಗ್ರತೆ ವಹಿಸುವುದೊಳ್ಳೆಯದು.

ಹೊಳೆ ನೀರಿಗೆ ದೊಣ್ಣೆನಾಯ್ಕನ ಅಪ್ಪಣೆ?

ಹೊಳೆ ನೀರಿಗೆ ದೊಣ್ಣೆ ನಾಯ್ಕನ ಅಪ್ಪಣೆಯಂತೆ! ಭಾರತ ಆಹಾರ ನಿಗಮ (ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾ) ದಲ್ಲಿ ಸೊಸೈಟಿಗಳಿಗೆ ಬಿಡುಗಡೆ ಮಾಡಲು ಅತ್ಯುತ್ತಮ ಅಕ್ಕಿ ಬಂದಿದ್ದರೆ, ಅದನ್ನು ಬಟವಾಡೆ ಮಾಡಿ ದಾಖಲಾತಿ ಕೊಡುವ ಗುಮಾಸ್ತನಿಗೆ ಸೊಸೈಟಿಗಳ ಲಾರಿಯವರು ನೂರು ರೂ ಕೊಡಬೇಕಂತೆ!

ಹೀಗೂ ಎಲ್ಲಾದರೂ ಉಂಟೆ ಸ್ವಾಮಿ? ಎಂದೀರಿ. ಹೌದು, ಉಂಟು. ಶಿವಮೊಗ್ಗದ ಭಾ. ಆ. ನಿಗಮದ ಕಚೇರಿಯಲ್ಲಿ.

ಈ ವಾರದಲ್ಲಿ ಭಾ. ಆ. ನಿಗಮದಿಂದ ಬಿಡುಗಡೆಯಾದ ಅಕ್ಕಿ ಅತ್ಯುತ್ತಮವಾದುದಾಗಿತ್ತಂತೆ. ತರಲು ಹೋದ ಕೊಪ್ಪ ತಾ. ವ್ಯ.ಮಾ.ಸ.ಸಂಘದ ಲಾರಿಯವರಿಗೆ ಲೋಡೇನೋ ಸಿಕ್ಕಿತು. ಆದರೆ ಅಕ್ಕಿ ಸಾಗಿಸಬೇಕಾದರೆ ಸಂಬಂಧಪಟ್ಟ ಪಾವತಿ ದಾಖಲೆ ಬೇಕಲ್ಲ. ಅದನ್ನು ಕೊಡಬೇಕಾದರೆ ಅಲ್ಲಿನ ಸಂಬಂಧಪಟ್ಟ ಗುಮಾಸ್ತ, "ಇಷ್ಟು ಒಳ್ಳೆ ಅಕ್ಕಿ ಕೊಡುತ್ತಿದ್ದೇನೆ. ನನಗೆ ನೂರು ರೂ. ಕೊಡಿ" ಎಂದನಂತೆ. "ಅಕ್ಕಿ ನನ್ನದಲ್ಲ ಸ್ವಾಮಿ, ಸೊಸೈಟೀದು. ನೀವು ದಾಖಲೆ ಕೊಡುವುದಿದ್ದರೆ ಕೊಡಿ" ಎಂದು ಡ್ರೈವರ್ ಹೇಳಿದರೆ ದಾಖಲೆ ಕೊಡಲಿಲ್ಲವಂತೆ. ಧೈರ್ಯ ಮಾಡಿ ಡ್ರೈವರ್ ಇದ್ದಷ್ಟೇ ದಾಖಲೆಗಳೊಂದಿಗೆ ಲೋಡು ಸಾಗಿಸಿಯೇ ಬಿಟ್ಟರು.

ಮರುದಿನ ಸೊಸೈಟಿ ಕಾರ್ಯದರ್ಶಿಗಳು ಭಾ.ಆ.ನಿ. ಮ್ಯಾನೇಜರ್‌ಗೆ ಫೋನ್ ಮಾಡಿ ವಿಷಯ ತಿಳಿಸಿ, "ಹಣ ಯಾವ ರೂಪದಲ್ಲಿ ಕಳಿಸಬೇಕು? ಚೆಕ್/ಡ್ರಾಫ್ಟ್‌ನಲ್ಲೋ ಅಥವಾ ನಾವೇ ತಂದು ಕೊಡಬೇಕೋ?" ಎಂದು ಕೇಳಿದಾಗ ದಾಖಲೆಗಳನ್ನು ಕಳಿಸುವುದಾಗಿ ಒಪ್ಪಿದರಂತೆ. ಆಕಸ್ಮಾತ್ ಹೀಗೆ ಪೂರ್ತಿ ದಾಖಲೆಯಿಲ್ಲದೆ ಅಕ್ಕಿ ಸಾಗಿಸುವಾಗ ಯಾರಾದರೂ 'ಮೂಗಿನ ನೇರದ' ಅಧಿಕಾರಿಗಳು ಹಿಡಿದಿದ್ದರೆ ಎಷ್ಟು ತೊಂದರೆಯಾಗುತ್ತಿತ್ತು?

ಆದ್ದರಿಂದ ಹೀಗೆ ಸತಾಯಿಸುವುದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಗಳು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರಂತೆ.

ಕೊಪ್ಪದಲ್ಲೊಂದು ಖಾಸಗಿ ಕೈಗಾರಿಕಾ ಶಿಕ್ಷಣ ಸಂಸ್ಥೆ

(ಎರಡನೆ ಪುಟದಿಂದ)

ವಾರದಲ್ಲಿ ಆರಂಭವಾಗುತ್ತವೆ.

ಇಲ್ಲಿರುವ ಕೋರ್ಸುಗಳೆಂದರೆ: ಎಲೆಕ್ಟ್ರಿಕ್ ಮೋಟಾರ್ ರೀವೈಂಡಿಂಗ್ ಮತ್ತು ರಿಪೇರಿ (10 ತಿಂಗಳು), ಎಲೆಕ್ಟ್ರಿಕ್ ವೈರಿಂಗ್ ಮತ್ತು ವಿದ್ಯುತ್ ಉಪಕರಣಗಳ ರಿಪೇರಿ (3 ತಿಂಗಳು), ರೇಡಿಯೋ, ಟ್ರಾನ್ಸಿಸ್ಟರ್, ಮತ್ತು ವಾಚ್‌ಗಳ ನಿರ್ಮಾಣ ಮತ್ತು ರಿಪೇರಿ (6 ತಿಂಗಳು), ಟೆಲಿವಿಜನ್, ಟೇಪ್ ರೆಕಾರ್ಡರ್, ಸ್ಟೀರಿಯೋಗಳ ನಿರ್ಮಾಣ ಮತ್ತು ರಿಪೇರಿ (6 ತಿಂಗಳು), ಈ ಎರಡೂ ಕೋರ್ಸುಗಳ ಸಂಯುಕ್ತ ತರಬೇತಿ (10 ತಿಂಗಳು,) ಟ್ರಾನ್ಸಿಸ್ಟರ್‌ಗಳ ನಿರ್ಮಾಣ ಮಾತ್ರ (3 ತಿಂಗಳು), ಪ್ಲಂಬರ್ (ಪಂಪ್ ರಿಪೇರಿ ಮತ್ತು ಪೈಪ್ ಜೋಡಣೆ) (3 ತಿಂಗಳು), ವಿದ್ಯುತ್ ಲೈನ್‌ಮನ್ (3 ತಿಂಗಳು) ಹಾಗೂ ರೆಫ್ರಿಜರೇಶನ್ ಮತ್ತು ಏರ್ ಕಂಡಿಶನಿಂಗ್ ಇಂಜಿನಿಯರಿಂಗ್ (6 ತಿಂಗಳು.) ಈ ಪೈಕಿ ಎಲೆಕ್ಟ್ರಿಕ್ ವೈರಿಂಗ್, ಪ್ಲಂಬರ್ ಹಾಗೂ ಲೈನ್‌ಮನ್-ಈ ಮೂರಕ್ಕೆ ಹುಡುಗರಿಗೆ ಮಾತ್ರ ಶಿಕ್ಷಣ. ಉಳಿದೆಲ್ಲದಕ್ಕೂ ಹುಡುಗರು, ಹುಡುಗಿಯರು ಇಬ್ಬರಿಗೂ ಅವಕಾಶವಿದೆ. ಎಲ್ಲ ಕೋರ್ಸ್‌ಗಳಿಗೂ 300 ರಿಂದ 900 ರೂ. ಗಳೊಳಗೆ ಶುಲ್ಕ ತಗಲುತ್ತದೆ. ಅಲ್ಲದೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಅಲ್ಲಿನ ಕಲಿಕೆಯೊಂದಿಗೆ ಇಲ್ಲೂ ಕಲಿಯಲು ಆಗುವಂಥ ವಿಶಿಷ್ಟ ಏರ್ಪಾಡು ಇದೆ. ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದ 'ಟ್ರೈಸಂ'ನಂಥ ಯೋಜನೆಗಳ ಅನುಕೂಲ ಪಡೆದುಕೊಳ್ಳಲು ಸಹ ಅವಕಾಶವಿದೆ.

ಸಾಮಾನ್ಯವಾಗಿ ಪಟ್ಟಣಗಳಲ್ಲಿ ಇಂಥ ಕೋರ್ಸುಗಳ ಶಿಕ್ಷಣಕ್ಕೆ ಬೇಕಷ್ಟು ಅವಕಾಶಗಳಿರುತ್ತವೆ. ಆದರೆ ಈ ಪ್ರದೇಶದವರಿಗೆ ಇಷ್ಟು ಸಮೀಪದಲ್ಲಿ ಇಂಥದೊಂದು ಶಿಕ್ಷಣ ಸಿಗುವುದು ಅಪರೂಪದ ಅವಕಾಶವೇ ಸರಿ ಎಂದರೆ ಉತ್ಪ್ರೇಕ್ಷೆಯಲ್ಲ. ಅದರಲ್ಲೂ ಕೂಡ, ಬೇರೆಡೆ ಇಂಥ ಶಿಕ್ಷಣ ಪಡೆದಾಗ ವೃತ್ತಿ ಆರಂಭಿಸಬೇಕಾದರೆ ಹಲವು ಕಾಲ ಬೇರೆಲ್ಲಾದರೂ ವರ್ಕ್‌ಶಾಪಿನಲ್ಲಿ ಪ್ರಾಯೋಗಿಕವಾಗಿ ಕೆಲಸ ಮಾಡಿ ಅನುಭವ ಪಡೆಯಬೇಕಾಗುತ್ತದೆ. ಆದರೆ ಇಲ್ಲಿನ ವಿಶಿಷ್ಟತೆಯೆಂದರೆ, ಶಿಕ್ಷಣ ಪಡೆದವರು (ನಿರ್ಮಾಣವಾಗಲೀ, ರಿಪೇರಿಯಾಗಲಿ) ನೇರವಾಗಿ ವೃತ್ತಿಗಿಳಿಯಲು ಸಾಧ್ಯವಾಗುವಂತೆ ಪ್ರಾಯೋಗಿಕವಾಗಿ ಪಾಠಗಳನ್ನು ವಿಶಿಷ್ಟ ರೀತಿಯಲ್ಲಿ ಅಳವಡಿಸಿರುವುದು ಎಂದು ಈ ಸಂಸ್ಥೆಯ ಸಂಸ್ಥಾಪಕ ಪ್ರಿನ್ಸಿಪಾಲ್ ಪಿ.ಸಿ. ಜಾನ್ ಹೇಳುತ್ತಾರೆ. ಈ ಅಂಶವನ್ನು ಇಲ್ಲಿ ಈಗಾಗಲೇ ತರಬೇತಿ ಪಡೆದವರಿಂದ ಖಚಿತಪಡಿಸಿಕೊಳ್ಳಬಹುದು.

ಒಟ್ಟಿನಲ್ಲಿ ಜೀವನದ ಬಗ್ಗೆ ಜವಾಬ್ದಾರಿಯಿರುವವರು ಖಂಡಿತ ಕಲಿತು ಮುಂದೆ ಬೆಳೆಯಲು ಸಾಧ್ಯವಿರುವಂಥ ಉತ್ತಮ ಅವಕಾಶ ಇದೆನ್ನಲು ಸಂದೇಹವಿಲ್ಲ. ಪ್ರಿನ್ಸಿಪಾಲರ ಮಾತುಗಳಲ್ಲೇ ಹೇಳುವುದಾದರೆ, "ದೇಶದ ಜನರಿಗೆಲ್ಲ ಉದ್ಯೋಗ ಕೊಡುವಷ್ಟು ನಮ್ಮ ಸರ್ಕಾರ ಬೆಳೆದಿಲ್ಲವಾದರೂ ಸಹ [illegible] ದವರಿಗೆ ತಿಳಿದಿಲ್ಲ. ಅದ್ದರಿಂದ ನಾವು ಸ್ವಯಂ ಉದ್ಯೋಗಿಗಳಾಗಿ ಸರ್ಕಾರದ ಜೊತೆ [illegible] ವು ಕೊಡುವುದು ಯೋಗ್ಯ."

ಪುರಸಭೆ ಬಾಡಿಗೆದಾರರ ಹಗರಣ: ಒಂದು ಒಳನೋಟ

(ಮೂರನೆ ಪುಟದಿಂದ)

ನಲ್ಲಿ ಭಾಗವಹಿಸಬಹುದೆಂದು ಪುರಸಭೆ ಸೂಚಿಸಿತು. 82 ರ ಡಿಸೆಂಬರ್‌ನಲ್ಲಿ ಹರಾಜು ನಡೆದು ತಿಂಗಳಿಗೆ 450 ರಿಂದ 500 ರೂ. ಈ ಬಾಡಿಗೆಗೆ ಎಲ್ಲವೂ ಹರಾಜಾಗಿ 6 ತಿಂಗಳ ಕುಠೇವಣಿಯೂ ಸಂದಾಯವಾಯಿತು.

ಸಹಜ.ಆದರೆ ಅಷ್ಟರಲ್ಲಿ ಇವರುಗಳು ಪ್ರಕರಣ [illegible] ಪೂರ್ಣ ಪೀಠಕ್ಕೆ ಒ [illegible] ಪುನಃ ತಡೆಯಾಜ್ಞೆ. 450 ಗಿ [illegible] ತಿಂಗಳ ಠೇವಣಿ ಮತ್ತು [illegible] ಹಳೇ ಬಾಕಿ ಪೂರ್ತಿಕಟ್ಟಿ, ಇದೇ [illegible]ಯಲ್ಲಿ ಮುಂದುವರಿಯುವ ನಿಬಂಧನೆ.

ಆದರೆ ಹಾಗೆಲ್ಲ ಪುರಸಭೆಗೆ ಕಟ್ಟಬೇಕಾದ್ದು ಕಟ್ಟಿದರೆ ತಮ್ಮ ಘನಸ್ಥಿಕೆ ಎಲ್ಲಿ ಉಳಿಯಿತು? ಬೇಕಾದರೆ ವಸೂಲಿಗೆ ಪುರಸಭೆ ಮತ್ತೆ ಕೋರ್ಟಿಗೆ ಹೋಗಲಿ!

ಪುರಸಭೆ ಮತ್ತೆ ಕೋರ್ಟಿಗೆ ಹೋಯಿತು. 1983 ರಲ್ಲಿ ಬಾಡಿಗೆದಾರರ ದಾವೆ ವಜಾ ಆಯಿತು.

ಆದರೇನಂತೆ? ಕಾನೂನಿಗೆ, ನ್ಯಾಯಕ್ಕೆಲ್ಲ ತಲೆ ಬಾಗಿ ಹಾಗೆಲ್ಲ ಜಾಗ ಖಾಲಿ ಮಾಡಲು ಆಗುತ್ತೇನು? ಬೇಕಾದರೆ ಖಾಲಿ ಮಾಡಿಸಲು ಕೋರ್ಟಿಗೆ ಹೋಗಲಿ!

ಪುರಸಭೆ ಅಕ್ರಮ ವಾಸ ತೆರವಿನ ಕಾನೂನಿನನ್ವಯ ಕ್ರಮ ಕೈಗೊಂಡಾಗ 'ಕಾನೂನು ಬಾಹಿರವಾಗಿ' (ಕಾಲಾವಕಾಶ ಕೊಡದೆ ಹಾಗೂ ತಮಗೆ-ವಾಸದ ಹಕ್ಕು ಇರುವ ಬಗ್ಗೆ ತಮ್ಮ ದಾಖಲೆಗಳನ್ನು ಪರಿಶೀಲಿಸದೆ!) ತಮ್ಮನ್ನು ತೆರವು ಮಾಡಿಸುತ್ತಿರುವುದಾಗಿ ಚಿಕ್ಕಮಗಳೂರು ಸೆಶನ್ಸ್ ಕೋರ್ಟಿಗೆ ಹತ್ತಿದರು. ಅಲ್ಲಿಂದ ತಡೆಯಾಜ್ಞೆ.

ಪುನಃ ದಾಖಲೆಗಳನ್ನು ಸಲ್ಲಿಸಲು,ತಮ್ಮ ವಾದ ಮಂಡಿಸಲು ಮುಖ್ಯಾಧಿಕಾರಿಗಳಿಂದ ತಿಂಗಳ ಕಾಲಾವಕಾಶ. 3 ಹಿಯರಿಂಗ್. ಎಲ್ಲರ ವಾದ ಕೇಳಿ, ತೆರವು ಮಾಡಬೇಕೆಂಬ ಆಜ್ಞೆ ಮಾಡಿ ಮತ್ತೆ 45 ದಿನ ಕಾಲಾವಕಾಶ. ಆದರೆ ಇದಕ್ಕೆ ಮುಖ್ಯಾಧಿಕಾರಿಗೆ ಏನು ಹಕ್ಕು ಎಂದು ಮತ್ತೆ ಕೋರ್ಟ್. ಮತ್ತೆ ತಡೆಯಾಜ್ಞೆ. ಆದಕ್ಕೆ ಸುಪ್ರಿಂ ಕೋರ್ಟಿನ ಎರಡು ತೀರ್ಪುಗಳ ಉದಾಹರಣೆ ಒದಗಿಸಿದಾಗ ಅಂತೂ 17-6-85 ರಂದು ಅಂತೂ ಅಂತಿಮ ತೀರ್ಪು—

"ಸದರಿ ಬಾಡಿಗೆದಾರರಿಗೆ ಈ ಮಳಿಗೆಗಳಲ್ಲಿ ಇನ್ನು 1 ದಿನವೂ ಇರಲು ಅವಕಾಶವಿಲ್ಲ".

ಇವರುಗಳು ಈ ತೀರ್ಪಿನ ಮೇಲೆ ಮತ್ತೆ ಹೈಕೋರ್ಟಿಗೆ ಹೋಗಿ ಕೂರಬೇಕೆಂಬಷ್ಟರಲ್ಲಿ ಪುರಸಭೆ ಜಿಲ್ಲಾಧಿಕಾರಿಗಳನ್ನು ಕಂಡು ಅವರಿಂದ ಎಸ್ಪಿ ಮೂಲಕ ರಿಸರ್ವ್ ಪೋಲೀಸ್ ರಕ್ಷಣೆ ಪಡೆದುಕೊಂಡಿತು. ರಿಸರ್ವ್ ಪೋಲೀಸರೊಡನೆ ಕೋರ್ಟ್ ತೀರ್ಪು ಬಂದಾಗ ಈ ಹಗರಣದ ಒಂದು ಮಜಲು ಮುಕ್ತಾಯ.

ಆಗಲೂ ಪುರಸಭೆಯವರು ಮುಟ್ಟುಗೋಲು ಹಾಕಿಕೊಳ್ಳದೆ ಪ್ರಕರಣವನ್ನು ಆದಷ್ಟೂ ಸೌಹಾರ್ದಯುತವಾಗಿ ಇತ್ಯರ್ಥಪಡಿಸುವ ದೃಷ್ಟಿಯಿಂದ ಸಂಜೆಯವರೆಗೆ ಗಡುವು ಕೊಟ್ಟು ಅವರವರ ಮಾಲು ಖಾಲಿ ಮಾಡಿಕೊಳ್ಳಲು ಅವಕಾಶ ಕೊಟ್ಟರು.

ಖಾಯಂ ಆಗಿ ಬಾಡಿಗೆಗೆ ತಾವೇ ಇರುವುದೂ ಅಲ್ಲದೆ ಬಾಡಿಗೆಯನ್ನೂ ಏರಿಸಲು ಬಿಡಬಾರದು ಎಂಬುದು; ಅದಕ್ಕಿಂತಲೂ ಮುಖ್ಯವಾಗಿ. ತಮ್ಮಕರಾರು ಮುಗಿದಿದ್ದರೂ ನ್ಯಾಯ-ನೀತಿಗಳನ್ನೆಲ್ಲ ಗಾಳಿಗೆ ತೂರಿ, ಕಾನೂನಿನ ದೌರ್ಬಲ್ಯವನ್ನು ದುರುಪಯೊಗಪಡಿಸಿಕೊಂಡು ಠೇವಣಿ-ಬಾಡಿಗೆ ಏನೂ ಕೊಡದೆ ಪರ್ಮನೆಂಟಾಗಿ ವ್ಯಾಪಾರ ಮಾಡುತ್ತ ಹೋಗುವ, ಹೋಲಿಕೆಗೆ ಸಿಗದಷ್ಟು ಹೀನತನ—ಕೆಲವರ ಇಂಥ ದುರಾಸೆ-ದುರ್ಬುದ್ಧಿಗಳಿಂದಾಗಿ ಉಳಿದವರೂ ನಷ್ಟಕ್ಕೊಳಗಾಗಬೇಕಾದುದು ಈ ಪ್ರಕರಣದ ಪಾಠ. ಪುರಸಭೆಯ ಮಾಜಿ ಉಪಾಧ್ಯಕ್ಷ, ಆಳುವ ಪಕ್ಷದ ಪದಾಧಿಕಾರಿ-ಇಂಥವರೇ ಇದರ ನಾಯಕತ್ವ ವಹಿಸಿದ್ದು ನಮ್ಮ ಸಮಾಜದ ಕೊಳಕಿನ ಇನ್ನೊಂದು ಚಿತ್ರ.

ಈಗಲಾದರೂ ಈ ಮಂದಿ ತಮ್ಮ ಬಾಕಿ ಕೊಡುವುದಿಲ್ಲವೆಂದು ಮತ್ತಷ್ಟು ಹಣವನ್ನು ಕೋರ್ಟಿಗೆ, ಲಾಯರಿಗೆ ಸುರಿದು ಪುರಸಭೆಯನ್ನೂ ಅನಗತ್ಯ ಜಂಜಾಟಕ್ಕೆ ಇಳಿಸುವ ಬದಲು ಒಂದಿಷ್ಟು ಮನುಷ್ಯತ್ವ ಬೆಳೆಸಿಕೊಂಡರೆ ಊರಿಗೂ ಸ್ವಲ್ಪ ಕ್ಷೇಮ.

ಆದರೆ ಹಾಗೆಲ್ಲ ನೇರವಾಗಿ ನಡಕೊಂಡರೆ ನಮ್ಮ ದೊಡ್ಡಸ್ತಿಕೆ ಎಲ್ಲಿ ಉಳಿಯಿತು? ನಾವು ಈ ಕೊಪ್ಪದ 'ಗಣ್ಯ'ರಲ್ಲವೆ?

ವಿದ್ಯಾರ್ಥಿಸರ್ಕಾರ ಉದ್ಘಾಟನೆ

ಹಾಲ್ಮತ್ತೂರು: ಇಲ್ಲಿನ ಹಿ.ಪ್ರಾ. ಶಾಲೆಯಲ್ಲಿ ಮಾಜಿ ಪಂಚಾಯ್ತಿ ಅಧ್ಯಕ್ಷ ಹೆಚ್. ವೈ. ಸೀತಾರಾಮ ಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ಹೆಚ್.ಡಿ. ಶ್ರೀನಿವಾಸ್ ವಿತರಿಸಿದರು.

ವಿದ್ಯಾರ್ಥಿ ಸರಕಾರವನ್ನು ಹೆಚ್. ವಿ. ನಾಗರಾಜ್ ಉದ್ಘಾಟಿಸಿದರು. ವೈ. ಕೆ. ವಿಷ್ಣುಮೂರ್ತಿ ಸರ್ಕಾರದ ಪ್ರತಿನಿಧಿಗಳಿಗೆ ಪ್ರಮಾಣವಚನ ಬೋಧಿಸಿದರು. ವಿದ್ಯಾರ್ಥಿ ಹೆಚ್. ಪ್ರೇಮಾನಂದ ವಿದ್ಯಾರ್ಥಿ ಸರ್ಕಾರದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಮುಖ್ಯೋಪಾಧ್ಯಾಯ ಕೆ. ವೆಂಕಟೇಶಯ್ಯ ಸ್ವಾಗತಿಸಿದರು. ಹೆಚ್.ಎಸ್. ಚಂದ್ರಶೇಖರಯ್ಯ ವಂದಿಸಿದರು.

ಮಾಜಿ ತಾ. ಅ. ಮಂಡಳಿ ಸದಸ್ಯನಿಂದ

ಹರಿಜನರ ಎತ್ತಂಗಡಿ ಹವಣಿಕೆ:

ದಲಿತ ಸಂಘರ್ಷ ಸಮಿತಿ ಚಳುವಳಿ ಎಚ್ಚರಿಕೆ

(ಒಂದನೇ ಪುಟದಿಂದ)

ದಲಿತರಿಗೆ ಜಮೀನು!

ಗುಡ್ಡೇತೋಟದ ಸ.ನಂ. 122 ರಲ್ಲಿ ಇಲ್ಲಿನ ಬೆಳ್ಳಯ್ಯ, ನಾಗಯ್ಯ, ತಿಮ್ಮಯ್ಯ, ಕಳಸಯ್ಯ ಎಂಬವರ ಹೆಸರಿನಲ್ಲಿ, ಅವರ್‍ಯಾರೂ ಸಹಿ ಹಾಕದಿದ್ದರೂ ಸುಬ್ಬಣ್ಣ ತಲಾ 4 ಎಕರೆಯಂತೆ ದರ್ಖಾಸ್ತ್ ಮಾಡಿ ಈಗ ಅಲ್ಲೇ ಮನೆ ಕಟ್ಟಿಕೊಂಡು ಕಾಫಿ ತೋಟ ಮಾಡುತ್ತಿದ್ದಾರೆಂದು ಹೇಳಲಾಗಿದೆ. ಇದರ ವಿರುದ್ಧ ದಲಿತರು ಸಲ್ಲಿಸಿದ ದೂರಿನಂತೆ ಉಪ ವಿಭಾಗಾಧಿಕಾರಿಗಳು ತನಿಖೆ ಮಾಡಲು ಕೊಪ್ಪ ತಹಸೀಲ್ದಾರರಿಗೆ ಆದೇಶಿಸಿದ್ದರೂ ತಲೆ-ಬುಡ ಇಲ್ಲದ ತನಿಖೆಯ ನಾಟಕ ಮಾಡಿರುವುದಾಗಿ ತಿಳಿದು ಬರುತ್ತದೆ. ಅಂತೂ ದಲಿತರ ಹೆಸರಿನಲ್ಲಿ ಸುಬ್ಬಣ್ಣನಿಗೆ ಜಮೀನು ದಕ್ಕಿದಂತಾಗಿದೆ.

ದಲಿತ ಸಂಘರ್ಷ ಸಮಿತಿ ಪ್ರತಿಭಟನೆ

ಈ ಎಲ್ಲ ಅನ್ಯಾಯಗಳ ವಿರುದ್ಧ ಈ ಹರಿಜನರು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಶಾಖೆಗೆ ದೂರು ಸಲ್ಲಿಸಿದ್ದು, ಜಿಲ್ಲಾ ಸಂಚಾಲಕ ಎಂ.ಡಿ. ಗಂಗಯ್ಯ ಅವರು ಜೂನ್ 17 ರಂದು ತಹಸೀಲ್ದಾರ್ ಮತ್ತು ಬಿಡಿಓ ಅವರುಗಳನ್ನು ಕಂಡು ಚರ್ಚಿಸಿದರು. ಸದರಿ ಸ. ನಂ. 71 ರಲ್ಲಿ ಲಭ್ಯವಿರುವ ಭೂಮಿಯನ್ನು 'ಎ' ಪಟ್ಟಿಗೆ ತಂದು ಅದನ್ನು ಅಲ್ಲಿನ ದಲಿತರಿಗೇ ತಲಾ 1-2 ಎಕರೆಯಂತೆ ಮಂಜೂರು ಮಾಡಲು ಕ್ರಮಕೈಗೊಳ್ಳುವುದಾಗಿ ತಹಸೀಲ್ದಾರ್ ಭರವಸೆ ಕೊಟ್ಟಿದ್ದಾರೆ.

ಇತ್ತ ಬಿ. ಡಿ. ಓ. ಕಚೇರಿಯಲ್ಲಿ ಇಲ್ಲಿನ 8 ಜನರಿಗೆ ಜನತಾ ಮನೆ ಮಂಜೂರಾದಂತೆ ದಾಖಲಾಗಿದ್ದು, ಅವರುಗಳಿಗೆ ಇನ್ನು ತಲಾ 100 ರೂ. ಕೊನೆಯ ಕಂತು ಕೊಟ್ಟರೆ ಮುಗಿಯಿತೆಂದು ಬಿ.ಡಿ.ಓ. ತಿಳಿಸಿದರು. ಇದಕ್ಕೆ ದ.ಸಂ.ಸ. ತೀವ್ರವಾಗಿ ಆಕ್ಷೇಪಿಸಿ, ಸ್ಥಳ ತನಿಖೆ ಮಾಡಿ ಮನೆಗಳಿಲ್ಲದವರಿಗೆಲ್ಲ ಮನೆ ಕೊಡುವಂತೆ, ಹಾಗೂ 8 ಮನೆಯನ್ನು ಹರಿಜನರ ಹೆಸರಿನಲ್ಲಿ ದುರುಪಯೋಗ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದು ಬಿ.ಡಿ.ಓ. ಒಪ್ಪಿಕೊಂಡಿದ್ದಾರೆ. ಅಲ್ಲದೆ ಇಲ್ಲಿಗೆ ಕುಡಿವ ನೀರು ಮತ್ತು ವಿದ್ಯುದ್ದೀಪವನ್ನು ತುರ್ತಾಗಿ ಒದಗಿಸಲು ಅವರನ್ನು ದ. ಸಂ. ಸ. ಒತ್ತಾಯಿಸಿದೆ.

ಈ ಸೌಲಭ್ಯಗಳನ್ನು ಒದಗಿಸಲು ಇನ್ನು ಒಂದು ತಿಂಗಳೊಳಗೆ ಕ್ರಮ ಕೈಗೊಳ್ಳದಿದ್ದರೆ ಇದರ ವಿರುದ್ಧ ದಲಿತ ಸಂಘರ್ಷ ಸಮಿತಿ ಚಳುವಳಿ ನಡೆಸಬೇಕಾಗುವುದೆಂದು ಗಂಗಯ್ಯ ಎಚ್ಚರಿಸಿದ್ದಾರೆ.

ಧರ್ಮಛತ್ರದ ಶತಮಾನೋತ್ಸವ

ಹರಿಹರಪುರ: ಇಲ್ಲಿನ ನುಗ್ಗಿಮಕ್ಕಿ ಮಲ್ಲೇಶಯ್ಯನವರ ಧರ್ಮಛತ್ರದ ಮತ್ತು ಅಲ್ಲಿನ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಾಲಯದ ಶತಮಾನೋತ್ಸವ ಜೂನ್ 12 ರಂದು ಹರಿಹರಪುರ ಮಠಾಧೀಶರ ಅಧ್ಯಕ್ಷತೆಯಲ್ಲಿ ನಡೆಯಿತು.

ನುಗ್ಗಿಮಕ್ಕಿ ವೆಂಕಟಕೃಷ್ಣಪ್ಪ ಸ್ವಾಗತಿಸಿದರು. ಬಿ.ಸುಬ್ರಮಣ್ಯಂ ಛತ್ರದ ಅಂದು-ಇಂದಿನ ಸ್ಥಿತಿಗತಿ, ಮುಂದಿನ ಯೋಜನೆಗಳ ವರದಿ ಮಂಡಿಸಿದರು. ಸೋಮಶೇಖರಯ್ಯ ಛತ್ರದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿದರು. ಧರ್ಮದರ್ಶಿಗಳಾದ ಬಿ. ಜಿ. ಚಿದಂಬರ್, ನಾರ್ವೆ ನಾಗೇಂದ್ರ ಭಟ್ಟ ಇವರುಗಳು ಹಳ್ಳಿಯ ಪ್ರದೇಶದಲ್ಲಿ ಧರ್ಮ ಸಂಸ್ಥೆ, ದೇಗುಲಗಳಿಗೆ ಕಾನೂನಿನಿಂದ ಆಗಿರುವ ತೊಂದರೆಗಳನ್ನು ವಿವರಿಸಿ, ಅವುಗಳ ನಿವಾರಣೆಗೆ ಒತ್ತಾಯಿಸಿದರು.

ಶತಮಾನೋತ್ಸವದ ಸವಿನೆನಪಿನಲ್ಲಿ ಜನಸಾಮಾನ್ಯರ ಅನುಕೂಲಕ್ಕಾಗಿ ನಿರ್ಮಿಸಲು ಉದ್ದೇಶಿಸಲಾಗಿರುವ 'ವೆಂಕಟೇಶ ಮಂದಿರ'ದ ಶಿಲಾಫಲಕ ಅನಾವರಣ ಮಾಡಿದ [illegible] ಮಿಗಳು ಆಶೀರ್ವಚನ ನೀಡಿದರು. ಪಿ. ನೀಲಕಂಠ ಭಟ್ ವಂದಿಸಿದರು.

ಪ್ರಸ್ತುತ ಈ ಧರ್ಮಛತ್ರದಲ್ಲಿ [illegible] ಹಳ್ಳಿಗಳಿಂದ ಶಾಲೆಗೆ ಬರುವ ಮಕ್ಕಳಿಗೆ ಮಧ್ಯಾಹ್ನ ಉಚಿತ ಊಟ ನೀಡಲಾ[illegible]

ಉಚಿತ ಪಠ್ಯಪುಸ್ತಕ ವಿತರಣೆ

ಕೊಪ್ಪ: ಇಲ್ಲಿನ ಆರೂರು ಲಕ್ಷ್ಮೀನಾರಾಯಣರಾವ್ ಸರ್ಕಾರಿ ಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಪಿ. ರಘುವೀರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಶಾಲಾ ತನಿಖಾಧಿಕಾರಿ ಬಿ.ಲಕ್ಷ್ಮಿನಾರಾಯಣ್ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ನೀಡಿದರು. ಶಾಲಾಭಿವೃದ್ಧಿ ಸಮಿತಿ ಸದಸ್ಯ ಕೃಷ್ಣಮೂರ್ತಿ ಮಾತನಾಡಿದರು. ಮುಖ್ಯೋಪಾಧ್ಯಾಯರಾದ ಎ. ಅಚ್ಯುತರಾವ್ ಸ್ವಾಗತಿಸಿ, ಕೆ.ಮಂಜಭಟ್ಟ ವಂದಿಸಿದರು.

ಕೆಳಪೇಟೆಯ ತೋಮರ ಶೆಟ್ಟಿ ಹಿ.ಪ್ರಾ. ಶಾಲೆಯಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪುರಸಭಾಧ್ಯಕ್ಷ ಕೆ.ವಿ. ಮಂಜುನಾಥ ಶೆಟ್ಟಿ ಹಾಗೂ ಮುಖ್ಯ ಅತಿಥಿಗಳಾಗಿದ್ದ ಎ.ವಿ. ಕುಮಾರ್, ಪ್ರೋಕರ್, ಎಂ. ಎಸ್. ನಾರಾಯಣ್ ಅವರುಗಳು ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ವಿತರಿಸಿದರು. ಶಾಲೆಯ ಆವರಣದ ಸುತ್ತ ತಂತಿ ಬೇಲಿ ಹಾಕಿಸಲು ನಿರ್ಣಯಿಸಲಾಯಿತು. ಮುಖ್ಯೋಪಾಧ್ಯಾಯ ಬಿ.ರಾಮದಾಸ್ ಸ್ವಾಗತಿಸಿ, ಎನ್.ಡಿ. ನಾರಾಯಣಮೂರ್ತಿ ವಂದಿಸಿದರು.

ತನೂಡಿ ಹಿ. ಪ್ರಾ. ಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗೇಂದ್ರಗೌಡರ ಅಧ್ಯಕ್ಷತೆಯಲ್ಲಿ ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ಹಂಚಲಾಯಿತು. ಕೊಪ್ಪ ಕಿರಿಯ ಕಾಲೇಜು ಅಧ್ಯಾಪಕ ಕೆ. ಎಸ್. ಸುಬ್ರಮಣ್ಯ ಕಾರ್ಯಕ್ರಮ ಉದ್ಘಾಟಿಸಿದರು. ಶಾಲಾ ತನಿಖಾಧಿಕಾರಿ ಎನ್. ಆರ್. ಶ್ರೀನಿವಾಸ್, ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಲೋಕೇಶಗೌಡ, ಬಿ. ಶೀನಪ್ಪ, ಗಣೇಶಗೌಡ ಮುಂತಾದವರು ಹಾಜರಿದ್ದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.